**Ref**: 29/2021 ಡಬ್ಲ್ಯೂ. ಡಬ್ಲ್ಯೂ-6

**<u>ದಿನಾಂಕ 19.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ರವರಿಂದ:**

ದಿಃ16.08.2018 ರಂದು ತಿರುಪತಿಯ ವಿಕ್ರುತಮಾಲಾ ಕೈಗಾರಿಕಾ ಪ್ರದೇಶದಲ್ಲಿ ಇದ್ದಂತಹ 2 ನೇ ಪಕ್ಷಗಾರರ ಸಂಸ್ಥೆಯ ಘಟಕದಲ್ಲಿ ನಾವು ಕೆಲಸ ಮಾಡುತ್ತಿದ್ದಾಗ ಸದರಿ ವ್ಯಾಪ್ತಿಗೆ ಸಂಬಂಧಪಟ್ಟ ಡಿ.ಎಲ್.ಸಿ ರವರಲ್ಲಿ ಸಂಧನಾ ಪ್ರಕ್ರಿಯೆಗೆ ದೂರನ್ನು ದಾಖಲಿಸಿದ್ದೇವೆ ಎನ್ನುವುದು ನಿಜ. ಸದರಿ ಪ್ರಕರಣದಲ್ಲಿ ಮುರಳಿ ಎಂಬ ಕಾರ್ಮಿಕ ಮುಖಂಡ ಪ್ರತಿನಿಧಿಸುತ್ತಿದ್ದರು ಎನ್ನುವುದು ಸರಿಯಲ್ಲ. ಸದರಿ ಪ್ರಕರಣವನ್ನು ನಾವೆ ನಡೆಸುತ್ತಿದ್ದೇವು. ಆ ಸಮಯದಲ್ಲಿ 2 ನೇ ಪಕ್ಷಗಾರರ ಸಂಸ್ಥೆಗೆ COD ಬೇಡಿಕೆ ಅರ್ಜಿಯನ್ನು ಸಲ್ಲಿಸಿದ್ದೇವೆ ಎನ್ನುವುದು ನಿಜ.

ನನ್ನನ್ನು ಕೆಲಸದಿಂದ 2 ನೇ ಪಕ್ಷಗಾರರ ಸಂಸ್ಥೆಯೂ ವಜಾ ಮಾಡಿದ ನಂತರ ನಾನು ಅಟಲ್ ಬೀಮಾ ವ್ಯಕ್ತಿ ಕಲ್ಯಾಣ ಯೋಜನೆ ಅಡಿಯಲ್ಲಿ ಇ.ಎಸ್.ಐ ಇಲಾಖೆಯಿಂದ ನಿರುದ್ಯೋಗಿ ಭತ್ಯೆಯನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರ ಸಂಸ್ಥೆಯೂ ನನ್ನನ್ನು ಕೆಲಸದಿಂದ ವಜಾ ಮಾಡಿದ ನಂತರ retrenchment compensation ನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದರು ಎನ್ನುವುದು ನಿಜ. ಆಗ ನಾವು ತಕರಾರು ಮಾಡಲಿಲ್ಲ ಎನ್ನುವುದು ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎನ್ನುವುದು ನಿಜ. ನಮ್ಮನ್ನು 2 ನೇ ಪಕ್ಷಗಾರರ ಸಂಸ್ಥೆಯೂ ತಿರುಪತಿಯ ಘಟಕಕ್ಕೆ ನಿಯೋಜನೆಯ ಮೇರೆಗೆ ಕೆಲಸಕ್ಕೆ ಕಳುಹಿಸಿದ್ದ ಆದೇಶವನ್ನು ಸಂಸ್ಥೆಯೂ ರದ್ದು ಪಡಿಸಿರಲಿಲ್ಲ. ಆ ಅವಧಿಯಲ್ಲಿ ನಮ್ಮನ್ನು ಕೆಲಸದಿಂದ ವಜಾ ಮಾಡಿದ್ದರು ಎನ್ನುವುದು ನಿಜ. 2 ನೇ ಪಕ್ಷಗಾರರ ಸಂಸ್ಥೆಯೂ ನಮ್ಮನ್ನು ಕೆಲಸದಿಂದ ವಜಾ ಮಾಡಿರುವುದು ಕಾನೂನು ಬದ್ಧವಾಗಿದೆ ಎನ್ನುವುದು ಸರಿಯಲ್ಲ. ಸದರಿ ವಜಾ ಮಾಡಿದ ಆದೇಶವನ್ನು ತಿರುಪತಿಯ ಕಾರ್ಮಿಕ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಸಾಕ್ಷಿ ಹೇಳುತ್ತಾರೆ. 2 ನೇ ಪಕ್ಷಗಾರರ ಸಂಸ್ಥೆಯೂ ಮೈಸೂರಿನಲ್ಲಿ ಇರುತ್ತದೆ. ಈ ಪ್ರಕರಣದಲ್ಲಿ ನಾವು ಬೇಡಿದ ಪರಿಹಾರಕ್ಕೆ ಅರ್ಹನಿಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

Sd/-

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**